


# ಕೋವಿಡ್-19 ನಿಯಂತ್ರಣಕ್ಕಾಗಿ ಟೊಂಕಕಟ್ಟಿ ನಿಂತ 'ಗ್ರಾಸಿಂ' ಕಂಪನಿ

ಉತ್ತರ ಕರ್ನಾಟಕದ ಹೆಬ್ಬಾಗಿಲು ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಕುಮಾರಪಟ್ಟಣದಲ್ಲಿ 1974ರಲ್ಲಿ ಆದಿತ್ಯ ವಿಕ್ರಮ್ ಬಿರ್ಲಾಜಿ ಅವರ ಕನಸಿನ ಕೂಸಾಗಿ ಗ್ರಾಸಿಂ ಸಮೂಹದ ಕೈಗಾರಿಕಾ ಘಟಕ ಪ್ರಾರಂಭಗೊಂಡಿತು. ಸಾವಿರಾರು ಕುಟುಂಬಗಳಿಗೆ ನೆರಳಾಗಿರುವ ಕಂಪನಿಯಲ್ಲಿ 1336 ಮಂದಿ ಖಾಯಂ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಕಂಪನಿ ಉದಯವಾದ ದಿನದಿಂದ ಹತ್ತಾರು ಸಾಮಾಜಿಕ ಕಾರ್ಯಗಳಲ್ಲಿ ಗುರುತಿಸಿಕೊಂಡು ವಿಭಿನ್ನ ಪಥದಲ್ಲಿ ಪ್ರಗತಿಯತ್ತ ದಾಪುಗಾಲು ಇಡುತ್ತಿದೆ.



ಘಟಕದ ಮುಖ್ಯಸ್ಥ ಅಜಯಕುಮಾರ್ ಗುಪ್ತಾ ಅವರೊಂದಿಗೆ ನಿರ್ವಾಹಕ ಮುಖ್ಯಸ್ಥರಾದ ಹಾಗೂ ಸಿಬ್ಬಂದಿ ಅಶೋಕ್ ಪ್ರಭಾಕರನ್, ಮನೋಹರ ಕುಮಾರ್, ಸುಭಾಸ್ ಶರ್ಮಾ ಹಾಗೂ ಎಸ್.ಜಿ. ಭಟ್ ಇದ್ದಾರೆ.




ಯುನಿಟ್ ಹೆಡ್ ಅಜಯಕುಮಾರ್ ಗುಪ್ತಾ ಅವರೊಂದಿಗೆ ಕಾರ್ಮಿಕ ಸಂಘಟನೆಗಳು: ಎಚ್‌ಪಿಎಫ್: ಮಂಜುನಾಥ್.ಬಿ.ಎಸ್., ಜಾಫರ್ ಸಾಧಿಕ್, ಕೆ.ಜಿ.ಬಸವರಾಜ್, ಚಂದ್ರಶೇಖರ್.ಬಿ.ವೈ., ಮನೋಹರಯ್ಯ. ಜೆ.ಎಂ., ಪಕ್ಕೀರಪ್ಪ.ಎ ಹಾಗೂ ಜಿಆರ್‌ಡಿ: ಶಿವಪ್ಪ ಕೋಲಕಾರ, ಮಂಜುನಾಥ್.ವೈ.ಆರ್., ಮಂಜುನಾಥ್.ಎಫ್.ಎಸ್., ಮುದಿ ಮಲ್ಲನಗೌಡ್ರ, ಅಕ್ಬರ್ ಹುಸೇನ್ ಹಾಗೂ ನವೀನ್‌ಕುಮಾರ್ ಇದ್ದಾರೆ.

"ಕೊರೊನಾ ಹಾವಳಿಯಿಂದಾಗಿ ದೇಶವೇ 2-3 ತಿಂಗಳ ಕಾಲ ಲಾಕ್‌ಡೌನ್ ಆಗಿದ್ದರಿಂದ ಸಾಮಾನ್ಯ ಜನರ ಬದುಕು ತತ್ತರಿಸಿ ಹೋಗಿದೆ. ಒಪ್ಪತ್ತಿನ ಊಟಕ್ಕೂ

## ಕೋವಿಡ್ ತೊಲಗಿಸುವ ದೃಢ ಸಂಕಲ್ಪ – ಅಜಯಕುಮಾರ್ ಗುಪ್ತಾ



ಮನುಕುಲದ ಇತಿಹಾಸವನ್ನೊಮ್ಮೆ ನಾವು ತಿರುಗಿ ನೋಡಿದರೆ ಪ್ಲೇಗ್, ಸಿಡುಬು, ಕ್ಯಾನ್ಸರ್‌ನಂಥ ಭಯಾನಕ ಕಾಯಿಲೆಗಳು ಉಲ್ಬಣಿಸಿದಾಗ ಅವುಗಳ ವಿರುದ್ಧ ಹೋರಾಡಿ ಗೆದ್ದು ತೋರಿಸಿ ಕೊಟ್ಟಿದ್ದಾರೆ ನಮ್ಮ ಹಿರಿಯರು. ವಿಶ್ವವನ್ನೇ ತಲ್ಲಣಗೊಳಿಸಿರುವ ಕಾಣದ ವೈರಾಣುವನ್ನು ಮಟ್ಟ ಹಾಕುವುದು ಇಂದಿನ ವಿಜ್ಞಾನ ಯುಗದಲ್ಲಿ ನಮ್ಮ ಕೈಯಲ್ಲಿದೆ ಎಂದು ಗ್ರಾಸಿಂ ಘಟಕದ ಹಿರಿಯ ಮುಖ್ಯಸ್ಥ ಅಜಯಕುಮಾರ್ ಗುಪ್ತಾ ಹೇಳುತ್ತಾರೆ.

ಕೋವಿಡ್ ಸೋಂಕಿನಿಂದ ಸಂರಕ್ಷಿಸುವ ಹಿನ್ನೆಲೆಯಲ್ಲಿ ಕಂಪನಿ ಸಿಬ್ಬಂದಿ, ಅವರ ಕುಟುಂಬ ಹಾಗೂ ಸಮಾಜದ ಒಳಿತಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಎಲ್ಲಾ ಸ್ಥಳೀಯ ಗ್ರಾಮ ಪಂಚಾಯ್ತಿಗಳ ಸಹಕಾರ ಪಡೆದು ಕೋವಿಡ್ ಮಟ್ಟ ಹಾಕುವಂಥ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಲಾಗಿದೆ. ಚಿತ್ರಕಲಾ ಶಿಕ್ಷಕ ರಾಘವೇಂದ್ರ ನಾಯಕ ಅವರ ಮೂಲಕ ಕಂಪನಿ ಒಳಗೆ ಹಾಗೂ ಗ್ರಾಸಿಂ ಸಿರಿಗನ್ನಡ ವಿದ್ಯಾಲಯದ ಗೋಡೆಗಳ ಮೇಲೆ ಕೊರೊನಾ ಜಾಗೃತಿ ಚಿತ್ರಗಳನ್ನು ಬರೆಸಿ ಅರಿವು ಮೂಡಿಸಲಾಗಿದೆ.

ಕಣ್ಣಿಗೆ ಕಾಣದ ಒಂದು ವೈರಾಣು ಇಡೀ ವಿಶ್ವವನ್ನು ಸೋಲಿಸಲು ಸಾಧ್ಯವಿಲ್ಲ. ಕಂಪನಿ, ಸಿಬ್ಬಂದಿ ಹಾಗೂ ಕಾರ್ಮಿಕ ಸಂಘಟನೆಗಳು ಸಮಾಜದಿಂದ ಕೋವಿಡ್ ಹೊಡೆದೋಡಿಸುವ ದೃಢ ಸಂಕಲ್ಪ ಕೈಗೊಳ್ಳಲಾಗಿದೆ ಎಂದರು.

ಲಾಕ್‌ಡೌನ್ ಸಡಿಲಿಕೆಯಾದ ಬಳಿಕ ಕೈಗಾರಿಕೆ ಪ್ರಾರಂಭಿಸುವ ಮುನ್ನ ಜಿಲ್ಲಾಧಿಕಾರಿಗಳ ಸೂಚನೆಯಂತೆ ಹಾವೇರಿ ಜಿಲ್ಲಾ ಕೈಗಾರಿಕಾ ಸಂಸ್ಥೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ, ಇಲ್ಲಿನ ಕೋವಿಡ್ ಸೋಂಕು ಹರಡದಂತೆ ಕೈಗೊಂಡಿರುವ ಕ್ರಮಗಳು ಇತರೆ ಕೈಗಾರಿಕಾ ಕೇಂದ್ರಗಳಿಗೆ ಮಾದರಿ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ನಮ್ಮ ಘಟಕದಿಂದ ಬೇರೆ ಕೈಗಾರಿಕೆಗಳಿಗೆ ಮಾರ್ಗದರ್ಶನ ನೀಡುವಂತೆ ತಿಳಿಸಿದ್ದಾರೆ ಎಂದರು.

Advertorial